

ಡಾ.ವಿನೋದ ಛೆಬ್ಬಿ

**ವಿವಾಹಬಾಹಿರ ಸಂಬಂಧಗಳು ಎಲ್ಲ ಕಡೆಯೂ ನಿಷೇಧವಾದಷ್ಟೇ ವ್ಯಾಪಕವೂ ಆಗಿವೆ ಎಂದರೆ ಇದರ ಸಂಕೀರ್ಣತೆ ಎಷ್ಟಿರಬಹುದು?**

# 138: ಪರಸಂಬಂಧಗಳು-1

ಪತಿಪತ್ನಿಯರ ಸಂಬಂಧವು ಅತಿ ವಿಶಿಷ್ಟವಾದದ್ದು. ಅವರಿಬ್ಬರ ನಡುವೆ ಮಾತ್ರ ಅತ್ಯಂತ ನಿಕಟವಾದ ಭಾವನಾತ್ಮಕ ಹಾಗೂ ಮನೋಲೈಂಗಿಕ ಸಂಪರ್ಕ– ಸಂವಹನ ನಡೆಯುವ ಸಾಧ್ಯತೆ ಇರುತ್ತದೆ. ಹೀಗಾಗಿ ಅವರಲ್ಲಿ ಎಷ್ಟೇ ಕಲಹ ನಡೆಯಲಿ, ಒಬ್ಬರು ಇನ್ನೊಬ್ಬರಿಂದ ಎಷ್ಟೇ ದೂರವಾಗಲಿ, ಅಲ್ಲೊಂದು ಅಲಿಖಿತ ಒಪ್ಪಂದ ಇರುತ್ತದೆ: ಇಬ್ಬರ ಸಂಬಂಧದಲ್ಲಿ ಮೂರನೆಯವರಿಗೆ ಎಳ್ಳಷ್ಟೂ ಪಾಲಿಲ್ಲ! ಹೊರಗಿನ ಮೂರನೆಯವರು ಇಬ್ಬರ ಪೈಕಿ ಒಬ್ಬರಿಗೆ ಒಂದು ಗಡಿದಾಟಿ ಹತ್ತಿರವಾಗುವಾಗ ಏನೇನು ಅನಾಹುತ ಆಗುತ್ತದೆ ಎಂಬುದು ಯಾರದೇ ಊಹೆಗೂ ನಿಲುಕುವ ಮಾತು.

ಜಗತ್ತಿನ ಯಾವುದೇ ಸಂಸ್ಕೃತಿಯಲ್ಲಿ ವಿವಾಹಬಾಹಿರ ಸಂಬಂಧಗಳನ್ನು ಕುಟುಂಬದ ಭದ್ರತೆಗೆ ಧಕ್ಕೆ ತರುವ ಸಂಗತಿಯೆಂದೇ ಗಣಿಸಲಾಗುತ್ತದೆ. ಯಾವುದೇ ನಾಡಿನ ಕಾನೂನು–ಕಟ್ಟಳೆಗಳಲ್ಲೂ ಇವು ನಿಷೇಧ ಎನ್ನಿಸಿಕೊಳ್ಳುತ್ತವೆ. ಇಷ್ಟಾದರೂ ವಿವಾಹಬಾಹಿರ ಸಂಬಂಧಗಳು ಎಲ್ಲೆಡೆಯೂ ಕಂಡುಬರುತ್ತವೆ! ಅಷ್ಟೇ ಅಲ್ಲ, ಚೆನ್ನಾಗಿ ಹೊಂದಾಣಿಕೆ ಆಗಿ ಸಂಸಾರ ನಡೆಸುತ್ತಿರುವ ಸಂಬಂಧಗಳಲ್ಲೂ ಇವುಗಳ ಹಾಜರಿ ತಪ್ಪಿದ್ದಲ್ಲ. ಸಂಬಂಧದ ಸ್ವಾಸ್ಥ್ಯಕ್ಕೆ ಧಕ್ಕೆ ತರುವಂಥದ್ದು ಎಂದು ಗೊತ್ತಿದ್ದರೂ ಇವು ಘಟಿಸುತ್ತವೆ ಎಂದರೆ ಇಲ್ಲೇನೋ ಅನಿವಾರ್ಯತೆ ಇದೆ ಎಂದಾಯಿತು. ಇದೇನೆಂದು ಅರ್ಥಮಾಡಿಕೊಳ್ಳಲು ನನಗೆ ಗೊತ್ತಿರುವ ನೂರಾರು ದೃಷ್ಟಾಂತಗಳಲ್ಲಿ ಕೆಲವನ್ನು ನಿಮ್ಮೊಡನೆ ಹಂಚಿಕೊಳ್ಳುತ್ತ, ಪ್ರತಿ ಪ್ರಸಂಗದ ಹಿಂದಿರುವ ವಿದ್ಯಮಾನಗಳನ್ನೂ ಮನೋಭಾವವನ್ನೂ ಪರಿಶೀಲಿಸುತ್ತಿದ್ದೇನೆ.

**ದೃಷ್ಟಾಂತ 1:** ಮಧ್ಯವಯಸ್ಸಿನ ಈ ದಂಪತಿ ನನ್ನೆದುರು ಕುಳಿತಿದ್ದಾರೆ. ಹೆಂಡತಿ ಸಪ್ಪಗಿನ ಮುಖದಿಂದ ಹೇಳುತ್ತಾಳೆ: 'ಡಾಕ್ಟರ್, ಇವರಿಗೆ ಎಚ್‌ಐವಿ ಇದೆಯೋ ಹೇಗೆ ಎಂದು ಹೇಳಿ.' ವಿವರ ಕೇಳಿದಾಗ ಗೊತ್ತಾಗಿದ್ದು ಇದು: ದಂಪತಿ ಮದುವೆಗೆಂದು ದೂರದೂರಿಗೆ ಹೋದಾಗ ಅಲ್ಲಿ ಗಂಡನ ಹಳೆಯ ಸ್ನೇಹಿತೆ ಭೇಟಿಯಾಗಿದ್ದಳು. ಭೋಜನದ ನಂತರ ಗಂಡನು ಸ್ನೇಹಿತೆಯ ಜೊತೆಗೆ ಏಕಾಂತದಲ್ಲಿ ಕಳೆಯುವ ಸಂದರ್ಭ ಬಂತು. ಮಾತುಕತೆಯಲ್ಲಿ ಹಳೆಯ ನೆನಪುಗಳು ಉಕ್ಕಿ, ಸಮಾಗಮ ನಡೆದೇ ಬಿಟ್ಟಿತು. ಗಂಡನಿಗೆ ತಪ್ಪಿತಸ್ಥ ಭಾವ ಚುಚ್ಚಲು ಶುರುಮಾಡಿತು. ಮನೆಗೆ ಮರಳಿದ ಕೂಡಲೇ ಹೆಂಡತಿಯೊಡನೆ ಹಂಚಿಕೊಂಡ. ಅವಳಿಗೆ ಗಾಬರಿಯಾಗಿ, ಕಾಯಿಲೆ ಅಂಟಿರಬಹುದೇ ಎಂದು ನನ್ನಲ್ಲಿ ಕರೆದು ತಂದಿದ್ದಾಳೆ.

ಇಲ್ಲಿ ವಿವಾಹಬಾಹಿರ ಲೈಂಗಿಕ ಸಂಪರ್ಕವು ಅಕಸ್ಮಾತ್ತಾಗಿ ನಡೆದಿದ್ದು, ಗಂಡ ಅದನ್ನು ಹೇಳಿಕೊಳ್ಳದಿರಲು ಅವಕಾಶವಿತ್ತು. ಆದರೂ ಹೇಳಿಕೊಂಡಿದ್ದು ಅವನ ಪ್ರಾಮಾಣಿಕತೆಯನ್ನು ಎತ್ತಿತೋರಿಸುತ್ತದೆ. ಹಾಗಾಗಿ ಅವನದು ಅವಿವೇಕ ಎಂದು ಹೆಂಡತಿಗೆ ಅನ್ನಿಸಿದರೂ ಸಂಬಂಧಕ್ಕೆ ಬಗೆದ ದ್ರೋಹ ಎನ್ನಿಸಿಲ್ಲ. ಹಾಗಾಗಿ ಭದ್ರತೆಗೂ ಧಕ್ಕೆಯಿಲ್ಲ.

**ದೃಷ್ಟಾಂತ 2:** ಇತ್ತೀಚೆಗೆ ಇವಳು ಆಫೀಸಿನಿಂದ ದಿನಾಲೂ ತಡವಾಗಿ ಮನೆಸೇರುತ್ತಾಳೆ. ನಡುರಾತ್ರಿ ಯಾರಿಗೋ ಮೆಸೇಜ್ ಮಾಡುತ್ತಿರುತ್ತಾಳೆ. ಗಂಡ ವಿಚಾರಿಸಿದರೆ, ಸಂಕಷ್ಟದಲ್ಲಿರುವ ಗೆಳತಿಯೆಂದು ಹೇಳುತ್ತಾಳೆ. ಗಂಡ ಅವಳ ಈಮೇಲ್ ಸರಮಾಲೆಯನ್ನು ಪರಿಶೀಲಿಸಿದಾಗ ಅವಳಿಗೊಬ್ಬ ಪ್ರಿಯತಮ ಇರುವುದು ಗೊತ್ತಾಗಿ ಕೆಂಡಾಮಂಡಲ ಕೋಪ ಬಂದಿದೆ. ಹೆಂಡತಿಗೆ ನಾಲ್ಕೇಟು ಬಿಗಿದು ನನ್ನಲ್ಲಿ ಕರೆತಂದಿದ್ದಾನೆ. ಆಕೆ ಏಕಾಂತದಲ್ಲಿ ಹೇಳಿಕೊಂಡಿದ್ದು ಏನೆಂದರೆ, ಇವರದು ಹಿರಿಯರು ಏರ್ಪಡಿಸಿರುವ ಮದುವೆ. ಗಂಡ ವ್ಯವಹಾರ ನಿಪುಣ, ಆದರೆ ಭಾವಶೂನ್ಯ. ಅವಳೋ ಸಂವೇದನಾಶೀಲಳು. ನಾಲ್ಕು ವರ್ಷಗಳ ದಾಂಪತ್ಯದಲ್ಲಿ ಆಕೆಯ ಹೃದಯಕ್ಕೆ ತಟ್ಟುವಂಥದ್ದು ಏನೂ ನಡೆದಿಲ್ಲ. ಅವರ ಕಾಮಕೂಟವೂ ಯಾಂತ್ರಿಕವಾಗಿ ನಡೆಯುತ್ತ ಗಂಡನ ಪ್ರಾಬಲ್ಯದ ಸಂಕೇತವಾಗಿದೆ. ಮಗುವಾದರೆ ದುಃಖ ಮರೆತೀತು ಎಂದರೆ ಗಂಡನ ವೀರ್ಯದಲ್ಲಿ ವೀರ್ಯಾಣುಗಳಿಲ್ಲ, ಹಾಗೂ ಪರಪುರುಷನ ವೀರ್ಯದಾನ ಅವನಿಗೆ ಒಪ್ಪಿಗೆಯಿಲ್ಲ. ಕಿತ್ತುತಿನ್ನುವ ಒಂಟಿತನದಿಂದ ದೂರವಾಗಲು ಸಹೋದ್ಯೋಗಿಯ ಜೊತೆಗೆ ಹಂಚಿಕೊಂಡಾಗ ಇಬ್ಬರ ನಡುವೆ ಭಾವಬಾಂಧವ್ಯ ಬೆಳೆದಿದೆ. ಇಲ್ಲಿ ಶಾರೀರಿಕ ಸಂಬಂಧ ನಡೆದಿಲ್ಲ – ಅದು ಆಕೆಗೆ ಬೇಕಾಗಿಯೂ ಇಲ್ಲ. ಆದರೆ ಗಂಡ ಅವಳನ್ನು ನಂಬುತ್ತಿಲ್ಲ. ಎಲ್ಲ ಗಂಡಸರೂ ಹೆಣ್ಣನ್ನು ಭೋಗಿಸಲೆಂದೇ ಬಯಸುತ್ತಾರೆ ಎನ್ನುವುದು ಅವನ ಬಲವಾದ ನಂಬಿಕೆ. ಇಂಥವನೊಡನೆ ಬದುಕಲು ಹೊರಸ್ನೇಹ ಅತ್ಯಗತ್ಯ, ಇಲ್ಲವಾದರೆ ನಾನು ಬದುಕಲಾರೆ ಎಂದು ಇವಳ ನಂಬಿಕೆ.

ಇಲ್ಲಿ ಶಾರೀರಿಕ ಸಂಪರ್ಕ ಏನೇನೂ ಇಲ್ಲವಾದುದರಿಂದ ಇದೊಂದು ಭಾವನಾತ್ಮಕ ಪರಸಂಬಂಧ (Emotional affair) ಎನ್ನಿಸಿಕೊಳ್ಳುತ್ತದೆ. ಹೆಂಡತಿಯು ಗಂಡನ ಜೊತೆಗಿರುವ ಸಂಬಂಧವನ್ನು ಕಡೆಗಾಣಿಸಿಲ್ಲ ಎನ್ನುವುದು ಗಮನಿಸಬೇಕಾದ ಅಂಶವಾದರೂ ಗಂಡನಿಗೆ ದಾಂಪತ್ಯದ ಭದ್ರತೆ ಅಲ್ಲಾಡುತ್ತಿದೆ ಎನ್ನಿಸಿರುವುದೂ ಅಷ್ಟೇ ಮಹತ್ವದ್ದು.

**ದೃಷ್ಟಾಂತ 3:** ಗಂಡ ಸಂಸ್ಥೆಯೊಂದರ ಮಾಲೀಕ. ತನ್ನ ಸಹಾಯಕಿಯ ಜೊತೆಗೆ ಶಾರೀರಿಕ ಸಂಬಂಧ ಇಟ್ಟುಕೊಂಡಿರುವುದು ಹೆಂಡತಿಗೆ ಗೊತ್ತಾಗಿದೆ. ಎದುರು ಹಾಕಿಕೊಂಡು ಕೇಳಿದಾಗ ಮೊದಮೊದಲು ಅಲ್ಲಗಳೆದವನು ಕೊನೆಗೆ ಒಪ್ಪಿಕೊಂಡಿದ್ದಾನೆ. ಏನಾದರೂ ಆಕೆಯನ್ನು ಬಿಡಲು ಸಾಧ್ಯವಿಲ್ಲ ಎಂದಿದ್ದಾನೆ. ಹೆಂಡತಿಗೇನೂ ಕಡಿಮೆ ಮಾಡಿಲ್ಲವಲ್ಲ, ಹಾಗಾಗಿ ಆಕೆಯು ಇದನ್ನು ತಲೆಗೆ ಹಚ್ಚಿಕೊಳ್ಳುವುದು ಅಗತ್ಯವಿಲ್ಲ ಎಂಬುದು ಅವನ ವಾದ. ಆಕೆಯು ಮಕ್ಕಳೊಂದಿಗೆ ಮನೆಬಿಡಬೇಕು ಎಂದುಕೊಂಡರೆ, ಗಂಡನು ಪ್ರೇಮಿಯನ್ನು ಮನೆಯಲ್ಲೇ ತಂದಿಟ್ಟುಕೊಳ್ಳುತ್ತಾನೆ ಎನ್ನುವ ಭಯ. ದಾಂಪತ್ಯ ಮುರಿದುಕೊಳ್ಳಲು ತವರಿನ ಬೆಂಬಲವಿಲ್ಲ. ಕಂಗಾಲಾಗಿ ನನ್ನಲ್ಲಿ ಬಂದಿದ್ದಾಳೆ.

ಇಲ್ಲಿ ಗಂಡನು ಪಾರಮ್ಯದಿಂದ ಹೆಣ್ಣನ್ನು ಧಿಕ್ಕರಿಸುವ ಭಂಡತನ, ಹಾಗೂ ಹೆಂಡತಿಯ ನಿಸ್ಸಹಾಯಕ ಅವಲಂಬನೆ– ಎರಡೂ ಒಂದಕ್ಕೊಂದು ತಳಕುಹಾಕಿಕೊಂಡಿದ್ದು ಎದ್ದುಕಾಣುತ್ತಿದೆ. ಕೌಟುಂಬಿಕ ಭದ್ರತೆ ಯಾವಾಗ ಕುಸಿದೀತು ಎಂದು ಹೇಳಲಾಗುವುದಿಲ್ಲ.

**ದೃಷ್ಟಾಂತ 4:** ಇವರು ಒಂದೇ ವ್ಯವಹಾರದಲ್ಲಿ ಪಾಲುಗಾರರು. ಒಟ್ಟಿಗೆ ಓಡಾಡುತ್ತ ಶರೀರ ಸುಖವನ್ನು ಸಾಕಷ್ಟು ಅನುಭವಿಸಿ ನಂತರ ಮದುವೆಯಾಗಿದ್ದಾರೆ. ಗಂಡ ಜವಾಬ್ದಾರಿ ಉಳ್ಳವನು, ಆದರೆ ಗಂಭೀರ ಸ್ವಭಾವದವನು. ಹೆಂಡತಿ ಚೆಲ್ಲುಸ್ವಭಾವದವಳು. ಕೆಲವು ತಿಂಗಳಿಂದ ಆಕೆ ಇನ್ನೊಬ್ಬನೊಡನೆ ಪ್ರಣಯ ಕೂಟದಲ್ಲಿ ಮೈಚಳಿಬಿಟ್ಟು ಭಾಗವಹಿಸುತ್ತಿದ್ದಾಳೆ. ಗಂಡ ಪ್ರಶ್ನಿಸಿದಾಗ, 'ನಿನಗೋಸ್ಕರ ನಿಲ್ಲಿಸುತ್ತೇನೆ' ಎಂದು ನಿಲ್ಲಿಸಿದ್ದಾಳೆ. ನಂತರ ಆಕೆಗಾಗುವ ಖಿನ್ನತೆ ಹಾಗೂ ವಿರಹಕ್ಕೆ ಗಂಡನೇ ಜವಾಬ್ದಾರನೆಂದೂ ಅದಕ್ಕಾಗಿ ಅವನು ಹೆಚ್ಚಿನ ಹೊಣೆ ಹೊರಬೇಕೆಂದೂ ಅಪೇಕ್ಷಿಸುತ್ತಾಳೆ. ನನ್ನೊಡನೆ ಏಕಾಂತದಲ್ಲಿ ನಗುತ್ತ ಹೇಳಿಕೊಳ್ಳುತ್ತಾಳೆ: 'ಆಕರ್ಷಕ ಗಂಡಸರ ಜೊತೆ ಸಂಬಂಧ ಬೆಳೆಸಲು ಅಗತ್ಯವಾದ ಅಪಾಯಗಳನ್ನು ಎದುರಿಸುವುದು ನನಗಿಷ್ಟ!'

ಇಲ್ಲಿ ಹೆಣ್ಣು ತನ್ನ ವೈಯಕ್ತಿಕ ಆಮೋದ ಪ್ರಮೋದಗಳಿಗೆ ಮಹತ್ವ ಕೊಡುತ್ತ ಸಂಬಂಧವನ್ನು ಅಲಕ್ಷಿಸುತ್ತಿದ್ದಾಳೆ. ಹಾಗಾಗಿ ಸಂಬಂಧದ ಭದ್ರತೆಯನ್ನು ಕಾಪಾಡುವ ಒತ್ತಡ ಗಂಡನ ಮೇಲೆ ಬಿದ್ದಿದೆ.

ಮೇಲಿನ ದೃಷ್ಟಾಂತಗಳನ್ನು ಗಮನಿಸಿದರೆ ಒಂದು ವಿಷಯವಂತೂ ಸ್ಪಷ್ಟವಾಗುತ್ತದೆ: ಪರಸಂಬಂಧಗಳಲ್ಲಿ ನಡೆಯುವ ಕ್ರಿಯೆ–ಪ್ರಕ್ರಿಯೆಗಳು ಭಾವನಾತ್ಮಕ ಅಥವಾ ಲೈಂಗಿಕ ಎಂದು ನೇರವಾಗಿ, ಸರಳವಾಗಿರದೆ ಸಂಕೀರ್ಣವೂ ಕ್ಲಿಷ್ಟವೂ ಆಗಿರುತ್ತವೆ. ಹಾಗಾಗಿ ವಿವಾಹಬಾಹಿರ ಸಂಬಂಧಗಳ ಒಳಹೊಕ್ಕು ಮನೋವೈಜ್ಞಾನಿಕ ದೃಷ್ಟಿಕೋನದಿಂದ ಪರಿಶೀಲಿಸುವುದು ಅಗತ್ಯವಾಗುತ್ತದೆ.

ಇದರ ಬಗೆಗೆ ಇನ್ನಷ್ಟು ಮುಂದಿನ ಕಂತುಗಳಲ್ಲಿ ತಿಳಿಯೋಣ.

**ಉಚಿತ ಸಹಾಯವಾಣಿಗೆ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. ಲೈಂಗಿಕ ಸಮಸ್ಯೆಗಳಿಗೆ: 8050255229 (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: 8494944888 (11ರಿಂದ ಸಂಜೆ 5ರ ತನಕ).**